ಆ) ಹೌದು, ಬಿಜಾಪುರ ನಗರಸಭೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವುಗಳು ಈ ಸ್ಥಳದಲ್ಲಿ ರೂ.3.74 ಕೋಟಿ ಅಂದಾಜು ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣವನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ. ಈ ಬಗ್ಗೆ ಸರ್ಕಾರವು ಇನ್ನೂ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ.

ವಿಷಯ:- ವಿಜಾಪುರ ನಗರಕ್ಕೆ ಒಳಚರಂಡಿ ವ್ಯವಸ್ಥೆ.

1052 (1089) ಶ್ರೀ ಬಸವನಗೌಡ ರಾ. ಪಾಟೀಲ, (ವಿಜಾಪುರ):-ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದ ಒಳಚರಂಡಿ ವ್ಯವಸ್ಥೆ ಹಳೆಯದಾಗಿದ್ದು ಬೆಳೆಯುತ್ತಿರುವ ಪ್ರದೇಶದಲ್ಲಿ ಒಳಚರಂಡಿ ಯೋಜನೆ ಇಲ್ಲದೇ ನಾಗರೀಕರು ತೀವ್ರ ಸಮಸ್ಯೆ ಎದುರಿಸುತ್ತಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಲಿ ಇರುವ ಒಳಚರಂಡಿ ವ್ಯವಸ್ಥೆಯ ಕಲ್ಮಶ ನಿಲ್ಲುವ ಪ್ರದೇಶವು ನಗರದ ಒಳ ಪ್ರದೇಶದಲ್ಲಿ ಸೇರಿದ್ದರಿಂದ ಸುತ್ತ ಮುತ್ತಲಿನಲ್ಲಿರುವ ನಾಗರೀಕರು ತೀವ್ರ ತೊಂದರೆ ಮತ್ತು ಅನಾರೋಗ್ಯ ಅನುಭವಿಸುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರದವರು ತೆಗೆದುಕೊಳ್ಳುವ ಕ್ರಮಗಳೇನು?

ಇ) ಬೆಳೆಯುತ್ತಿರುವ ನಗರದ ಹೊರವಲಯಗಳಿಗೆ ಒಳಚರಂಡಿ ಯೋಜನೆ ಯಾವಾಗ ಪ್ರಾರಂಭಿಸಲಾಗುವುದು?

ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಹೌದು.

ಆ) ಇಲ್ಲ.

ಇ) ಆದಷ್ಟು ಶೀಘ್ರವಾಗಿ ಹಣದ ಲಭ್ಯತೆಯ ಮೇರೆಗೆ.

ವಿಷಯ:- ತಾಳಿಕೋಟೆ ಪುರಸಭೆಯಲ್ಲಿ ಪೌರ ಕಾರ್ಮಿಕರ ಕೊರತೆ

1053 (1757) ಶ್ರೀ ಬಸವನಗೌಡ ರಾ. ಪಾಟೀಲ್, (ವಿಜಾಪುರ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಳಿ ಕೋಟೆ ಪುರಸಭೆಯಲ್ಲಿ ಪೌರ ಕಾರ್ಮಿಕರ ತೀವ್ರ ಕೊರತೆಯಿಂದ ನಗರದಲ್ಲಿ ಸ್ವಚ್ಛತೆಯು ಗಂಭೀರ ರೂಪ ತಾಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಪುರಸಭೆಯಲ್ಲಿ ಸದ್ಯಕ್ಕಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು?

ಇ) ಬೆಳೆಯುತ್ತಿರುವ ಪಟ್ಟಣಕ್ಕೆ ಈಗಿರುವ ಪೌರ ಕಾರ್ಮಿಕರ ಸಂಖ್ಯೆ ಸಮರ್ಥನೀಯವೇ?

ಈ) ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಉ) ಯಾವಾಗ ಪೌರಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಇಲ್ಲ.

ಆ) 21.

ಇ) ಸುಮಾರು 4 ಪೌರಕಾರ್ಮಿಕರ ಕೊರತೆ ಇದೆ.

ಈ) ಪೌರ ಕಾರ್ಮಿಕರ ನೇಮಕಾತಿಗೆ ಸಾಕಷ್ಟು ಸಮಯ ಹಿಡಿಸುತ್ತದೆ. ಮತ್ತು ಇದು ದೊಡ್ಡ ಪ್ರಮಾಣದ ಖರ್ಚನ್ನು ಒಳಗೊಂಡಿರುತ್ತದೆ. ಆದ್ದರಿಂದ ಸರ್ಕಾರವು, ಖಾಸಗಿಯವರಿಗೆ ಸ್ವಚ್ಛತೆ ಕೆಲಸ ಒಪ್ಪಿಸಿದಲ್ಲಿ ಅದು ಕಡಿಮೆ ವೆಚ್ಚ ಒಳಕೊಂಡಿದ್ದು ಹೆಚ್ಚು ಸಮರ್ಥವಾಗಿ ನಿರ್ವಹಿಸಲ್ಪಡುವುದರಿಂದ ಎಲ್ಲಾ ಮುನ್ಸಿಪಾಲಿಟಿಗಳಿಗೆ, ಸ್ವಚ್ಛತೆ ಕೆಲಸವನ್ನು ಖಾಸಗಿಯವರಿಂದ ಟೆಂಡರ್ ಕರೆದು ನಿರ್ವಹಿಸ-ತಕ್ಕದೆಂದು ಸೂಚಿಸಲಾಗಿದೆ.

ವಿಷಯ:- ವಿಜಾಪುರ ನಗರಸಭೆಯಲ್ಲಿ ಪೌರ ಕಾರ್ಮಿಕರ ಕೊರತೆ.

1054 (1589) **ಶ್ರೀ ಬಸವನಗೌಡ ರಾ. ಪಟೇಲ್ (ವಿಜಾಪುರ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ನಗರಸಭೆಯಲ್ಲಿ ಒಟ್ಟು ಪೌರ ಕಾರ್ಮಿಕರ ಸಂಖ್ಯೆ ಎಷ್ಟು ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು?

ಆ) ವಿಜಾಪುರ ನಗರದಲ್ಲಿ ಪೌರ ಕಾರ್ಮಿಕರ ಕೊರತೆಯಿಂದ ಸ್ವಚ್ಛತೆ ತೀರ ಹದಗೆಟ್ಟು ಗಂಭೀರ ಪರಿಸ್ಥಿತಿ ಎದುರಿಸುವುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಕಳೆದ ಬಾರಿ ಅವಧಿಯಲ್ಲಿ ಕಾನೂನಿನ ಅಡಿಯಲ್ಲಿ ಆಯ್ಕೆ ಮಾಡಿಕೊಂಡ 40 ಜನ ಪೌರ ಕಾರ್ಮಿಕರ ನೇಮಕಾತಿಯನ್ನು ಕ್ರಮಬದ್ಧಗೊಳಿಸಿ ಸಧ್ಯಕ್ಕಿರುವ ಗಂಭೀರ ಸಮಸ್ಯೆಯನ್ನು ಪರಿಹರಿ-ಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) 289, ಖಾಲಿ ಹುದ್ದೆಗಳು 101

ಆ) ಇಲ್ಲ

ಇ) ನೇಮಕಾತಿಯು ಕ್ರಮಬದ್ಧವಾಗಿಲ್ಲದಿದ್ದುದರಿಂದ ಬೆಳಗಾಂ ವಿಭಾಗಾಧಿಕಾರಿಗಳು ಇದಕ್ಕೆ ತಡೆಯಾಜ್ಞೆ ನೀಡಿದ್ದಾರೆ. ಅದೂ ಅಲ್ಲದೇ ಉಚ್ಚ ನ್ಯಾಯಾಲಯದಲ್ಲಿ ಈ ನೇಮಕಾತಿಗೆ ಸಂಬಂಧಿಸಿ-ದಂತೆ 5 ಪ್ರಕರಣಗಳು ಬಾಕಿ ಇವೆ. ಉಚ್ಚ ನ್ಯಾಯಾಲಯದ ಅಂತಿಮ ತೀರ್ಪು ಬಂದ ನಂತರವೇ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ವಿಷಯ:- ವಿಜಾಪುರ ನಗರಸಭೆಗೆ ಆಕ್ಟ್ರಾಯ್ ಸಹಾಯ ಧನ

1055 (1966) **ಶ್ರೀ ಬಸನಗೌಡ ರಾ. ಪಾಟೀಲ್, (ವಿಜಾಪುರ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?